ರಿಂದ ೭ನೇ ತರಗತಿಗಳಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೬ಜನ ಉಪಾಧ್ಯಾಯರಿದ್ದು ೭ನೇ ಉಪಾಧ್ಯಾಯರನ್ನು ನೇಮಿಸುವ ಅವಶ್ಯಕತೆ ಬಂದಾಗ ದೈಹಿಕ ಶಿಕ್ಷಣ ತರಬೇತಿ ಪಡೆದ ಅಧ್ಯಾಪಕರನ್ನು ನೇಮಿಸಬೇಕೆಂದು ನಿರ್ದೇಶನವಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಯಾರಿಗೆ ಹೇಳಿದ್ದಾರೆ ? ಜಿಲ್ಲಾಪರಿಷತ್ತಿನವರಿಗೆ ಹೇಳಿದ್ದಾರೆ. ಇವತ್ತು ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೬ಜನ ಅಧ್ಯಾಪಕರು ಇಲ್ಲ. ಮೂರು ಜನ ಅಥವಾ ಇಬ್ಬರು ಜನರು ಇದ್ದಾರೆ. ಅಂತಹ ಪೂರ್ಣ ಪ್ರಾಥಮಿಕ ಶಾಲೆಗಳ ಗತಿ ಏನು ? ಆದುದರಿಂದ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದೈಹಿಕ ಶಿಕ್ಷಣ ಎಲ್ಲಾ ಮಕ್ಕಳಿಗೂ ಅತ್ಯಗತ್ಯವಿರುವುದರಿಂದ ಎಲ್ಲಾ ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ೬ ಜನ ಉಪಾಧ್ಯಾಯರ ಲೆಕ್ಕವನ್ನು ತೆಗೆದುಕೊಳ್ಳದೇ ಪ್ರತಿಯೊಂದು ಶಾಲೆಗೆ ಒಬ್ಬಬ್ಬ ಶಾರೀರಿಕ ಶಿಕ್ಷಕರನ್ನು ನೇಮಿಸುವುದು ಅತ್ಯಗತ್ಯ ಏಕೆಂದರೆ ಇವತ್ತು ಶಾರೀರಿಕ ಶಿಕ್ಷಣದಲ್ಲಿ ತರಬೇತಿ ಪಡೆದವರ ಕೊರತೆ ಇಲ್ಲ. ಅನೇಕ ಜನ ಪಿಟಿಎಡ್ ಮುಗಿಸಿಕೊಂಡು ನಿರುದ್ಯೋಗದಿಂದ ಬಳಲುತ್ತಿದ್ದಾರೆ ಇಂತಹವರಿಗೆ ಉದ್ಯೋಗ ದೊರಕುತ್ತದೆ. ಹಾಗೂ ನಮ್ಮ ಮಕ್ಕಳಿಗೂ ಶಾರೀರಿಕ ಶಿಕ್ಷಣ ದೊರಕುತ್ತದೆ ಮತ್ತು ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಮನುಷ್ಯನ ಬದುಕಿನ ಎಲ್ಲಾ ರಪ್ಯರಂಗಸ್ಥಳಗಳಲ್ಲಿ ಈ ಶಿಕ್ಷಣರಂಗ ಅತ್ಯಂತ ಪ್ರಾಮುಖ್ಯವಾಗಿರುವುದರಿಂದ ಈ ರಂಗ ಎಲ್ಲ ದೃಷ್ಟಿಯಿಂದ ಪ್ರಗತಿಯೊಂದಬೇಕು. ಇದು ಪ್ರಗತಿಯಾಗದೆ ಇದ್ದರೆ ಮುಂದಿನ ಬದುಕಿನಲ್ಲಿ ಪ್ರಗತಿ ಯಾಗುವುದು ಅಸಾಧ್ಯ. ಆದ್ದರಿಂದ ಎಲ್ಲ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರನ್ನು ನೇಮಿಸಬೇಕೆಂಬ ಆಜ್ಞೆ ಹೊರಡಿಸಬೇಕೆಂದು ಹೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೇ, ಇದರ ಬಗ್ಗೆ ಸಂಪೂರ್ಣವಾಗಿ ಪ್ರಯತ್ನ ಮಾಡಿ ಜಿಲ್ಲಾಪರಿಷತ್ತುಗಳಿಗೆ ನಿರ್ದಿಷ್ಟವಾದ ಒಂದು ಅಭಿಪ್ರಾಯವನ್ನು ಕೊಟ್ಟು ಶಾರೀರಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಆದೇಶವನ್ನು ನೀಡುತ್ತೇವೆ.

ರಾಜ್ಯದಲ್ಲಿ ಗ್ರಂಥಾಲಯಗಳಿಗೆ ಕಟ್ಟಡಗಳು

೧೬೯(೭೨೭) ಶ್ರೀಮತಿ ಸುಮಾ ವಸಂತ(ವೀರಾಜಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಜಿಲ್ಲಾ ಗ್ರಂಥಾಲಯಗಳಿಗೆ ಪ್ರತಿ ವರ್ಷ ಬಿಡುಗಡೆ ಮಾಡುತ್ತಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಅನೇಕ ಗ್ರಂಥಾಲಯಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದವರಿಗೆ ಗೊತ್ತಿದೆಯೆ, ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುತ್ತಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಜಿಲ್ಲಾ ಗ್ರಂಥಾಲಯಗಳಿಗೆ ೧೯೮೭–೮೮ ರಲ್ಲಿ ಯೋಜನೆ ಮತ್ತು ಯೋಜನೇತರ ಲೆಕ್ಕ ಶೀರ್ಷಿಕೆಯಲ್ಲಿ ೧೨೬.೦೩ಲಕ್ಷ ರೂ.ಗಳನ್ನು ಮತ್ತು ಜಿಲ್ಲೆಯ ಭೂ ಕಂದಾಯದ ಶೇಕಡ ೩ರ ಸಹಾಯಧನ ೧೬.೭೪ ಲಕ್ಷ ರೂ ಗಳನ್ನು ಒಟ್ಟು ೧೪೨.೭೭ ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗುತ್ತಿದೆ. (೧೯೮೭–೮೮ನೇ ಸಾಲಿನ ಮಾಹಿತಿಯಂತೆ ಜಿಲ್ಲಾವಾರು ಮಾಹಿತಿಯ ಪಟ್ಟಿಯನ್ನು ಲಗತ್ತಿಸಿದೆ.)

ಆ) ಹೌದು.

ಇ) ಪ್ರತಿ ವರ್ಷ ಯೋಜನೆ ಅಡಿಯಲ್ಲಿ ಲಭ್ಯವಿರುವ ಆಯವ್ಯಯವನ್ನು ಗಮನದಲ್ಲಿರಿಸಿ ಕೊಂಡು ಗ್ರಂಥಾಲಯ ಕಟ್ಟಡಗಳನ್ನು ನಿರ್ಮಿಸಲು ಹಣ ಮಂಜೂರು ಮಾಡಲಾಗುತ್ತದೆ.

ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ಹಂಚಲಾದ ಆಯವ್ಯಯಂ

(ರೂ.ಲಕ್ಷಗಳಲ್ಲಿ)

		ಯೋಜನೇತರ	ಯೋಜನೆ	ಒಟ್ಟುಮೊತ್ತ
೧)	ಬೆಂಗಳೂರು ನಗರ ಜಿಲ್ಲಾ ಕೇಂದ್ರ ಗ್ರಂಥಾಲಯ	೪.೩೧	೦.೩೪	೪.೬೫
೨)	ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ಗ್ರಂಥಾಲಯ	೪.೦೭	೦.೩೬	೪.೪೩
೩)	ಬಳ್ಳಾರಿ ಜಿಲ್ಲಾ ಕೇಂದ್ರ ಗ್ರಂಥಾಲಯ	೧೨.೪೨	೦.೩೧	೧೨.೭೩
೪)	ಕೋಲಾರ ,,	೬.೭೩	೦.೩೭	೭.೧೦
೫)	ತುಮಕೂರು ,,	೬.೬೫	೦,೩೫	೭.೧೦
೬)	ಶಿವಮೊಗ್ಗ ,,	೫.೮೯	೦.೩೮	೬.೨೭
೭)	ಚಿಕ್ಕಮಗಳೂರು ,,	೬.೧೫	೦,೩೬	೬.೫೧
೮)	ಚಿತ್ರದುರ್ಗ ,,	೭.೧೯	೦.೩೪	೭.೫೩
೯)	ಮೈಸೂರು ,,	೫.೨೪	೦.೩೫	೫.೮೯
೧೦)	ಮಂಡ್ಯ ,,	೪.೨೫	೦.೩೦	೪.೫೫
೧೧)	ಹಾಸನ ,,	೫.೫೨	೦.೩೮	೫.೯೦
೧೨)	ಮಡಿಕೇರಿ ,,	೩.೭೮	೦.೩೪	೪.೧೨
೧೩)	ಮಂಗಳೂರು ,,	೯.೫೪	೦.೩೬	೯.೯೦
೧೪)	ರಾಯಚೂರು ,,	೫.೯೧	೦.೩೮	೬.೨೯
೧೫)	ಬೀದರ್ ,,	೪.೭೨	೦.೩೭	೫.೦೯
೧೬)	ಗುಲ್ಬರ್ಗಾ ,,	೫.೫೮	೦.೩೫	೫.೯೮
೧೭)	ಧಾರವಾಡ ,,	೧೫.೭೭	೦.೩೪	೧೬.೧೧
೧೮)	ಬೆಳಗಾಂ ,,	೭.೪೬	೦.೩೨	೭.೭೮
೧೯)	ಬಿಜಾಪುರ ,,	೮.೮೯	೦,೪೧	೯.೩೦
೨೦)	ಕಾರವಾರ ,,	೫.೨೩	೦.೪೬	೫.೬೯
		೧೩೫.೬೦	೭.೧೭	೧೪೨.೭೭

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೇ, ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರಿಗೆ ವಸತಿ ಸೌಕರ್ಯವನ್ನೇನಾದರೂ ಕಲ್ಪಿಸಿಕೊಡುವ ಯೋಜನೆ ಇದೆಯೇ ? ೧೯೮೮-೮೯ರಲ್ಲಿ ಎಷ್ಟು ಕಟ್ಟಡಗಳನ್ನು ಕಟ್ಟಲು ಹಣ ಮಂಜೂರು ಮಾಡಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ. ನಮ್ಮಲ್ಲಿ ಜಿಲ್ಲಾಮಟ್ಟದಲ್ಲಿ ಕೂಡಾ ಗ್ರಂಥಾಲಯಗಳು ಇವೆ. ೨೦ ಜಿಲ್ಲೆಗಳಲ್ಲಿರುವ ಗ್ರಂಥಾಲಯಗಳ ಪೈಕಿ ೯ ಜಿಲ್ಲೆಗಳಲ್ಲಿನ ಗ್ರಂಥಾಲಯಗಳಿಗೆ ಸ್ವಂತ ಕಟ್ಟಡಗಳು ಇದ್ದು ಮಿಕ್ಕವು ಬಾಡಿಗೆ ಕಟ್ಟಡಗಳಲ್ಲಿ ಇವೆ. ಹಾಗೆಯೇ ತಾಲ್ಲೂಕು ಮಟ್ಟದಲ್ಲಿ ೧೭೫ ಗ್ರಂಥಾಲಯಗಳು ಇದ್ದು ಇವುಗಳ ಪೈಕಿ ೧೮ಕ್ಕೆ ಸ್ವಂತ ಕಟ್ಟಡಗಳಿದ್ದು ಮಿಕ್ಕ ಗ್ರಂಥಾಲಯಗಳು ಬಾಡಿಗೆ ಕಟ್ಟಡಗಳಲ್ಲಿ ಹಾಗೂ ಯಾರು ಉಚಿತವಾಗಿ ಗ್ರಂಥಾಲಯಗಳಿಗೆ ಸ್ಥಳ ಕೊಟ್ಟಿದ್ದಾರೆ ಅಂತಹ

ಕಡೆ ನಡೆಯುತ್ತಿವೆ. ಈ ರೀತಿ ಎಲ್ಲಾ ಹಂತಗಳಲ್ಲೂ ಗ್ರಂಥಾಲಯಗಳು ಇವೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬೇರೆ ಬೇರೆ ಸೌಕರ್ಯಗಳ ಮುಖಾಂತರವಾಗಿ, ಜಿಲ್ಲಾಪರಿಷತ್ತಿನ ಮುಖಾಂತರವಾಗಿ, ಆವರೂ ಕೂಡಾ ಕಟ್ಟಡಗಳನ್ನು ಒದಗಿಸುವುದರಿಂದ ಅಲ್ಲಿ ಕೂಡಾ ಪ್ರಾರಂಭ ಮಾಡುವುದಕ್ಕೆ ಆಗುತ್ತದೆ. ಗ್ರಂಥಾಲಯ ಕಟ್ಟಡಗಳಿಗೋಸ್ಕರವಾಗಿ ನಾವು ೩ ಲಕ್ಷ ರೂಪಾಯಿಗಳನ್ನು ವಾರ್ಷಿಕವಾಗಿ ತೆಗೆದಿಟ್ಟಿದ್ದೇವೆ. ಇದರಿಂದ ವರ್ಷದಲ್ಲಿ ಸರ್ಕಾರ ೨ ಗ್ರಂಥಾಲಯಗಳ ಕಟ್ಟಡಗಳನ್ನು ಕಟ್ಟಿಸಬಹುದು ಗ್ರಂಥಾಲಯಗಳ ಕಟ್ಟಡಗಳ ಬಗ್ಗೆ ಖಾಸಗಿಯವರು, ಜಿಲ್ಲಾಪರಿಷತ್ತು ಮತ್ತು ಬೇರೆ ಮಾಧ್ಯಮಗಳ ಮುಖಾಂತರವಾಗಿ ಸಾಕಷ್ಟು ವ್ಯವಸ್ಥೆ ಮಾಡಲಾಗಿದೆ.

ಶ್ರೀಮತಿ ಸುಮಾ ವಸಂತ.— ಗ್ರಂಥಾಲಯದಲ್ಲಿ ಪ್ರತಿ ವರ್ಷವೂ ಎಷ್ಟು ಪುಸ್ತಕಗಳನ್ನು ಖರೀದಿ ಮಾಡುತ್ತಿದ್ದಾರೆ. ಈ ರೀತಿಯ ಪುಸ್ತಕಗಳನ್ನು ಖರೀದಿ ಮಾಡಲು ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ ?

ಶ್ರೀ ಎಂ. ಚಂದ್ರಶೇಖರ್.— ಆ ಮಾಹಿತಿ ಸಧ್ಯದಲ್ಲಿ ನನ್ನಲ್ಲಿಲ್ಲ. ನಂತರ ಮಾನ್ಯ ಸದಸ್ಯರಿಗೆ ಆ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀಮತಿ ಸುಮಾ ವಸಂತ.—ವಾರಪತ್ರಿಕೆ ಮತ್ತು ದಿನ ಪತ್ರಿಕೆಗಳನ್ನು ಖರೀದಿ ಮಾಡುವುದಕ್ಕಾಗಿ ಹಿಂದೆ ೭೦೦ ರೂಪಾಯಿಗಳನ್ನು ಮಂಜೂರು ಮಾಡುತ್ತಿದ್ದರು. ಆದರೆ ಈಗ ಅದನ್ನು ೩೬೦ ರೂಪಾಯಿಗಳಿಗೆ ಇಳಿಸಿದ್ದಾರೆ. ಇದಕ್ಕೆ ಕಾರಣವೇನು ? ಈ ರೀತಿ ಮಾಡಿರುವುದರಿಂದ ಗ್ರಂಥಾಲಯಗಳಲ್ಲಿ ಯಾವುದೇ ದಿನ ಪತ್ರಿಕೆ ಹಾಗೂ ವಾರಪತ್ರಿಕೆಗಳನ್ನು ಖರೀದಿ ಮಾಡಿಲ್ಲ. ಈ ಬಗ್ಗೆ ಸಚಿವರು ಏನು ಹೇಳುತ್ತಾರೆ ?

ಶ್ರೀ ಎಂ. ಚಂದ್ರಶೇಖರ್.—ಹಣದ ಕೊರತೆಯಿಂದ ಆ ರೀತಿಯ ನಿರ್ದೇಶನ ಹೊರಗಿರಬಹುದು ಆದರೆ ಎಲ್ಲೆಲ್ಲಿ ದಿನ ಪತ್ರಿಕೆಗಳು ಹಾಗೂ ವಾರ ಪತ್ರಿಕೆಗಳನ್ನು ಕೊಡಿಸುವುದಕ್ಕೆ ಸಾಧ್ಯವೊ ಅಲ್ಲಲ್ಲಿ ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ನಂ.೧೭೪(೬೭೫) ಉತ್ತರಿಸುವುದಕ್ಕೆ ಸರ್ಕಾರದವರು ಸ್ವಲ್ಪ ಸಮಯವನ್ನು ಕೇಳಿದ್ದಾರೆ ,ಆದಕ್ಕಾಗಿ ಈ ಪ್ರಶ್ನೆಯನ್ನು ಮುಂದೂಡಿದ್ದೇನೆ.

ಶ್ರೀ ಬಿ. ರಾಚಯ್ಯ.—ನಂ.೧೭೫(೫೫೪)ಗೆ ಉತ್ತರ ಇನ್ನೂ ಬಂದಿಲ್ಲ. ಕೊನೆಯಲ್ಲಿ ತೆಗೆದುಕೊಳ್ಳಿ.

ಅಧ್ಯಕ್ಷರು.—ಆಗಬಹುದು. ೧೭೭(೬೭೬) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ).

ಪಿ. ಯು. ಸಿ. ಇಂಗ್ಲೀಷ್ ಪಠ್ಯ ಪುಸ್ತಕದ ಬದಲಾವಣೆ

೧೭೮(೭೧೫) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೭–೮೮ರ ಪರೀಕ್ಷೆಗಳಲ್ಲಿ ಪಿಯುಸಿ ೨ನೇ ವರ್ಷದ ಇಂಗ್ಲೀಷ್‌ನಲ್ಲಿ ರಾಜ್ಯಮಟ್ಟದ ಫಲಿತಾಂಶವೇನು ?

ಆ) ಸದ್ರಿ ಇಂಗ್ಲೀಷ್ ಪುಸ್ತಕವನ್ನು ಬದಲಿ ಮಾಡುವಂತೆ ಶಿಕ್ಷಕರು ಪೋಷಕರು ಹಾಗೂ ವಿದ್ಯಾರ್ಥಿಗಳು ಒತ್ತಾಯಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ?

ಇ) ಹಾಗಿದ್ದಲ್ಲಿ ಪುಸ್ತಕವನ್ನು ಬದಲಾಯಿಸಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೧೯೮೮ ಏಪ್ರಿಲ್ ಪರೀಕ್ಷೆ	ಉತ್ತೀರ್ಣರಾದ ವಿದ್ಯಾರ್ಥಿಗಳ	ಶೇಕಡ
ಹಾಜರಾದ ವಿದ್ಯಾರ್ಥಿಗಳ	ಸಂಖ್ಯೆ ೬೯,೨೦೫	ಫಲಿತಾಂಶ
ಸಂಖ್ಯೆ ೧,೮೨,೫೮೩		೩೭.೯
೧೯೮೮ರ ಸೆಪ್ಟೆಂಬರ್ ಪರೀಕ್ಷೆಗೆ	ಉತ್ತೀರ್ಣರಾವಿದ್ಯಾರ್ಥಿಗಳ	ಶೇಕಡ